ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು) :

ಅ. ಚಿಂಚೋಳಿ ಮತ ಕ್ಷೇತ್ರದ ಜಿಲ್ಲಾ ಮುಖ್ಯ ರಸ್ತೆಗಳಲ್ಲಿ, ಗುಂಡಿ ಮುಚ್ಚುವುದು, ಬರ್‌ಮ್ ಕಟ್ಟಿಂಗ್ ಅವಶ್ಯವಿದ್ದಲ್ಲಿ ದುರಸ್ತಿ ಮಾಡಲಾಗಿದೆ. ರಾಜ್ಯ ಹೆದ್ದಾರಿಯ ನಿರ್ವಹಣೆ ಕಾರ್ಯದ ಪ್ರಗತಿಯು ನಿಧಾನವಾಗಿತ್ತು. ಈಗ ಪ್ರಗತಿಯಲ್ಲಿದೆ.

ಆ. ನಿಧಾನವಾಗಿದ್ದ ಪ್ರಗತಿಗೆ ರಾಜ್ಯ ಹೆದ್ದಾರಿ ನಿರ್ವಹಣೆಯ ಗುತ್ತಿಗೆದಾರರಿಗೆ ದಂಡವಿಧಿಸಲಾಗಿದೆ. ಈಗ ಕಾಮಗಾರಿ ಪ್ರಗತಿಯಲ್ಲಿದೆ.

ಚಿಂಚೋಳಿಯಲ್ಲಿ ಸರ್ಕಾರಿ ಐ.ಟಿ.ಐ. ಶಿಕ್ಷಕ, ಶಿಕ್ಷಕೇತರ ಸಿಬ್ಬಂದಿ

882 (1557) - ಶ್ರೀ ಕೈಲಾಸನಾಥ ಪಾಟೀಲ್ (ಚಿಂಚೋಳಿ): ಮಾನ್ಯ ಕಾರ್ಮಿಕಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ಚಿಂಚೋಳಿಯಲ್ಲಿ ಸರಕಾರಿ ಕೈಗಾರಿಕಾ ತರಬೇತಿ ಕೇಂದ್ರದಲ್ಲಿ ಒಟ್ಟು ಮಂಜೂರಾದ ಶಿಕ್ಷಕರ ಹಾಗೂ ಶಿಕ್ಷಕೇತರ ಸಿಬ್ಬಂದಿಗಳೆಷ್ಟು;

ಆ. ಅವುಗಳಲ್ಲಿ ಖಾಲಿ ಇರುವ ಹುದ್ದೆಗಳೆಷ್ಟು, ಖಾಲಿ ಇದ್ದಲ್ಲಿ ವಿದ್ಯಾರ್ಥಿಗಳಿಗೆ ಬೋಧಿಸಲು ಮಾಡಿರುವ ಪರ್ಯಾಯ ವ್ಯವಸ್ಥೆ ಏನು?

ಶ್ರೀ ಖಮರುಲ್ಲ ಇಸ್ಲಾಂ (ಕಾರ್ಮಿಕ ಸಚಿವರು) :

ಅ. ಒಟ್ಟು ಮಂಜೂರಾದ ಹುದ್ದೆಗಳು - 21
ಶಿಕ್ಷಕರ ಹುದ್ದೆಗಳು - 8
ಶಿಕ್ಷಕೇತರ ಹುದ್ದೆಗಳು - 13

ಆ. ಖಾಲಿ ಇರುವ ಹುದ್ದೆಗಳು - 18

ಹತ್ತಿರದ ಸಂಸ್ಥೆಗಳಿಂದ ಹಿರಿಯ ತರಬೇತಿ ಅಧಿಕಾರಿಗಳ ನಿಯೋಜನೆ ಮತ್ತು ಅತಿಥಿ ಬೋಧಕರನ್ನು ಆಹ್ವಾನಿಸುವ ಮೂಲಕ ವಿದ್ಯಾರ್ಥಿಗಳಿಗೆ ಬೋಧಿಸುವ ವ್ಯವಸ್ಥೆ ಮಾಡಲಾಗಿದೆ.

ಮೈಸೂರು ಬೆಂಗಳೂರು ಎಕ್ಸಪ್ರೆಸ್ ಕಾರಿಡಾರ್ ಯೋಜನೆ

883 (401) - ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು (ಶಿವಾಜಿನಗರ): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ಮೈಸೂರು-ಬೆಂಗಳೂರು ನಡುವಿನ ವೇಗದ ಹೆದ್ದಾರಿ ಕಾರಿಡಾರ್ ಯೋಜನೆಯಡಿಯಲ್ಲಿ ರಸ್ತೆ ನಿರ್ಮಾಣಕ್ಕೆ ಮಾತ್ರ ಕೇಂದ್ರ ಸರ್ಕಾರ ಅನುಮತಿ ನೀಡಿರುವುದು ನಿಜವಲ್ಲವೇ;

ಆ. ಈ ಯೋಜನೆಯಡಿಯಲ್ಲಿ ಮಸಾಹತು ಅಭಿವೃದ್ಧಿಪಡಿಸಲು ಕೇಂದ್ರ ಸರ್ಕಾರದ ಪರಿಸರ ಇಲಾಖೆ ಅನುಮತಿ ನೀಡಿದೆಯೆ;

ಇ. ನೀಡದಿದ್ದಲ್ಲಿ ಕೇಂದ್ರ ಸರ್ಕಾರದ ಅನುಮತಿ ಇಲ್ಲದೆಯೇ ಮಸಾಹತು ಅಭಿವೃದ್ಧಿಪಡಿಸುವ ಕಾರ್ಯ ಪ್ರಾರಂಭವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ.

ಈ. ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ಕೈಗೊಳ್ಳುವ ಕ್ರಮಗಳೇನು;

ಉ. ಈ ಕಾರಿಡಾರ್ ಯೋಜನೆಯ ಕಾರ್ಯ ಪ್ರಗತಿಯ ವಿವರ ನೀಡುವುದು;

ಊ. ಈ ಯೋಜನೆ ಯಾವಾಗ ಪೂರ್ಣಗೊಳ್ಳುವುದು?

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು) :

ಅ. ಮೈಸೂರು-ಬೆಂಗಳೂರು ನಡುವಿನ ವೇಗದ ಹೆದ್ದಾರಿ ಕಾರಿಡಾರ್ ಯೋಜನೆಯ ರಸ್ತೆ ನಿರ್ಮಾಣಕ್ಕೆ ನಿಯಮಾನುಸಾರ ಅಗತ್ಯವಾದ ಅನುಮತಿಯನ್ನು ಕೇಂದ್ರ ಸರ್ಕಾರದ ಪರಿಸರ ಇಲಾಖೆಯ ವತಿಯಿಂದ ಪಡೆಯಲಾಗಿದೆ.

ಆ. ಸದರಿ ಯೋಜನೆಯಡಿಯಲ್ಲಿ ನಿರ್ಮಿಸಲು ಉದ್ದೇಶಿಸಿರುವ 5 ವಸಾಹತುಗಳನ್ನು ಅಭಿವೃದ್ಧಿಪಡಿಸಲು ಕೇಂದ್ರ ಸರ್ಕಾರದ ಪರಿಸರ ಇಲಾಖೆಯ ನಿಯಮಾನುಸಾರ ಅನುಮತಿಯು ಅಗತ್ಯವಿರುವುದಿಲ್ಲ.

ಇ. ಕೇಂದ್ರ ಸರ್ಕಾರದ ಪರಿಸರ ಇಲಾಖೆಯ ನಿಯಮಾನುಸಾರ ವಸಾಹತು ಅಭಿವೃದ್ಧಿಪಡಿಸಲು ಅನುಮತಿಯು ಅಗತ್ಯವಿಲ್ಲದಿರುವುದರಿಂದ ಕಂಪನಿಯವರು ಉದ್ದೇಶಿತ ವಸಾಹತುಗಳನ್ನು ರಸ್ತೆಗಳೊಂದಿಗೆ ಹಂತ ಹಂತವಾಗಿ ಅಭಿವೃದ್ಧಿಪಡಿಸುವ ಕಾರ್ಯ ಸರ್ಕಾರದ ಗಮನಕ್ಕೆ ಬಂದಿದೆ.

ಈ. ಉದ್ಭವಿಸುವುದಿಲ್ಲ.

ಉ. ಬೆಂಗಳೂರು-ಮೈಸೂರು ಕಾರಿಡಾರ್ ಹೈವೇ ಯೋಜನೆಯ ಪ್ರಸ್ತಾವನೆಯು ಕಾರ್ಯಗತವಾಗುವ ಅಂತಿಮ ಹಂತದಲ್ಲಿದೆ. ಕಂಪನಿಯು ಆರ್ಥಿಕ ಕ್ಲೋಜರ್ ಪೂರ್ಣಗೊಳಿಸುವ ಹಂತದಲ್ಲಿರುತ್ತದೆ.

ಊ. ಆರ್ಥಿಕ ಕ್ಲೋಜರ್ ದಿನದಿಂದ ಯೋಜನೆಯ ಕಾಮಗಾರಿಗಳು 10 ವರ್ಷಗಳ ಅವಧಿಯಲ್ಲಿ ಪೂರ್ಣಗೊಳ್ಳುತ್ತದೆ.

ಮುಜರಾಯಿ ಇಲಾಖೆಗೆ ಸೇರಿದ ಜಮೀನುಗಳ ಪರಭಾರೆ

884 (1044) - ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು (ಶಿವಾಜಿನಗರ): ಮಾನ್ಯ ಮುಜರಾಯಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. ಬೆಂಗಳೂರು ನಗರದಲ್ಲಿರುವ ಮುಜರಾಯಿ ದೇವಸ್ಥಾನಗಳೆಷ್ಟು?
2. ಇವುಗಳಿಗೆ ಸೇರಿದ ಆಸ್ತಿಗಳ ಬಗ್ಗೆ ಪೂರ್ಣ ವಿವರ ನೀಡುವುದು?
3. ಮುಜರಾಯಿ ಇಲಾಖೆಗೆ ಸೇರಿದ ಜಮೀನುಗಳನ್ನು ಖಾಸಗಿ ವ್ಯಕ್ತಿ/ ಸಂಸ್ಥೆಗಳಿಗೆ ಗುತ್ತಿಗೆಗೆ ನೀಡಲಾಗಿದೆಯೇ?
4. ಹಾಗಿದ್ದಲ್ಲಿ, ಅವುಗಳ ಬಗ್ಗೆ ಪೂರ್ಣ ವಿವರ ನೀಡುವುದು?
5. ಮುಜರಾಯಿ ದೇವಸ್ಥಾನಗಳಿಗೆ ಸೇರಿದ ಎಷ್ಟು ಜಾಗ ಪರಭಾರೆಯಾಗಿದೆ?
6. ಇವುಗಳನ್ನು ಸ್ವಾಧೀನಪಡಿಸಿಕೊಳ್ಳಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀಮತಿ ಸುಮಾ ವಸಂತ್ (ಮುಜರಾಯಿ ರಾಜ್ಯ ಸಚಿವರು) :

1. ಬೆಂಗಳೂರು ನಗರದಲ್ಲಿ ಒಟ್ಟು 52 ದೇವಾಲಯಗಳು ಮುಜರಾಯಿ ಇಲಾಖೆ ವ್ಯಾಪ್ತಿಯಲ್ಲಿ ಬರುತ್ತವೆ.
2. ದೇವಾಲಯವಾರು ಆಸ್ತಿ ವಿವರ ಪಟ್ಟಿ ಲಗತ್ತಿಸಿದೆ.
3. ಹೌದು.
4. - ಪಟ್ಟಿ ಲಗತ್ತಿಸಿದೆ. -
5. ಶ್ರೀ ಮಲ್ಲಿಕಾರ್ಜುನಸ್ವಾಮಿ ದೇವಾಲಯ, ಬಸವನಗುಡಿ ಇದಕ್ಕೆ ಸೇರಿದ ಒಟ್ಟು 903.87 ಚದರ ಮೀಟರ್ ಅಂದರೆ 9729.59 ಚದರ ಅಡಿಗಳ ವಿಸ್ತೀರ್ಣವನ್ನು ಚದರ ಅಡಿ ಒಂದಕ್ಕೆ ರೂ. 1000.00 ರಂತೆ ರೂ. 97,29,570-00 ಗಳಿಗೆ ಕೆ.ಪಿ.ಟಿ.ಸಿ.ಎಲ್. ರವರಿಗೆ ಮಾರಾಟ ಮಾಡಲಾಗಿದೆ.
6. ಪ್ರಶ್ನೆ ಉದ್ಭವಿಸುವುದಿಲ್ಲ.